ಕಥೆ

# ಕೃಷ್ಣಾ ತೀರದಲ್ಲಿ ಜುತ್ತಿ ಬಾಜಿ

■ ಪ್ರೊ.ಜೆ.ಎಚ್. ಹನ್ನೆರಡುಮಠ



ಬೆಂಗ್ಳೂರಿನಿಂದ ಕೂಡಲಸಂಗಮಕ್ಕೆ ಹೊಳೆ ಜಳಕ ಮಾಡಲು ಸೂಪರ್ ಡಿಲಕ್ಸ್ ಎಸಿ ಬಸ್ಸಿನಲ್ಲಿ ಉದ್ದ–ಅಗಲ ಆರಾಮಾಗಿ ಮಲಗಿ ಹೋದೆ! ಬಸ್ಸು ಜೋಗುಳ ಹಾಡುತ್ತಿತ್ತು. ರಾತ್ರಿ ನಕ್ಷತ್ರಗಳನ್ನು ಸುರಿಸುತ್ತಿತ್ತು! ಕುಂಭಕರ್ಣನಂತೆ ಹತ್ತು ತಾಸು ನಿದ್ದೆ ಹೊಡೆದು ಎಚ್ಚರಾದಾಗ ನಮ್ಮ ಸುಂದರ ಬಸ್ಸು ಆಗಲೇ ಮಲಪ್ರಭಾ ಬ್ರಿಜ್ಜು ದಾಟಿತ್ತು. ಕೂಡಲಸಂಗಪ್ಪನ ಕ್ರಾಸಿನಲ್ಲಿ ಬೆಳ್ಳಕ್ಕಿಗಳು ಮುಗಿಲ ತುಂಬ ಗುಳ್ಳವ್ವನ ಕುಣಿತ ಕುಣಿಯುತ್ತಿದ್ದವು.

ಕೂಡಲಸಂಗಪ್ಪನ ಕ್ರಾಸ್ ಬಂದ ತಕ್ಷಣ ಖಾರ ಚುಮ್ಮರಿ–ಘರಂ ಮಿರ್ಚಿ ವಾಸನಿ ಘಮ್ ಅಂತ ಮೂಗಿಗೆ ಅಡರಿತು. ಸಂಗಪ್ಪನ ಕ್ರಾಸಿಗೆ ಇಳಿದು, ಡಬ್ಬಿ ಅಂಗಡಿಯಲ್ಲಿ ಮಿರ್ಚಿ ಭಜಿ ತಿಂದು, ಒಂದು ವಾಟೆ ಸುಡುಸುಡು ಕುಚ್ಚಿದ ಚಾ ಕುಡಿದು, ಗುಡಿಗೆ ಹೋಗುವ ಇನ್ನೊಂದು ಬಸ್ಸಿಗೆ ಕಾದು ನಿಂತೆ. ನನ್ನ ಪಕ್ಕದಲ್ಲಿಯೇ ವಿಜಯನಗರದ ಅಂಬಾರಿ ಶೈಲಿಯ 'ಟಂಟಂ ಗಾಡಿ' ಬಂದು ನಿಂತಿತು.

ನಾನು ಜೀವನದಲ್ಲಿ ಟಂಟಂ ನೋಡಿದ್ದೇ ಇದು ಮೊದಲ ಸಲ. ಒಬ್ಬಳು ಜಿರ್ಲಿ–ಪುರ್ಲಿ ಮುದಿಕಿ ನನಗೆ ಹೇಳಿದಳು–

'ಹತ್ತೀ ಯಪ್ಪಾ ಟಂಟಂ...'

ನಾ ಕೇಳಿದೆ– 'ಟಂಟಂ ಅಂದ್ರ ಏನಬೇ?'

'ಐ ಶಿವನೇ... ಟಂಟಂ ಅಂದ್ರ ಟಂಟಂರೀ ಶಿವಾ... ಶಿವನೂ ಟಂಟಂ... ನೀವೂ ಟಂಟಂ.'

ಬಣ್ಣ ಬಣ್ಣದ ಟಂಟಂ ನೋಡಿ ನಾನೂ ಬಣ್ಣದ ಬುಗುರಿ ಆದೆ. ಟಂಟಂ ಗಾಡಿಯ ಹುಡುಗ ಕೂಗಿದ–

'ಬರ್ರೀ ಸಾಹೇಬ್ರ... ಟಂಟಂ ಹತ್ತೀದ್ರ ಕೂಡಲ ಸಂಗಪ್ಪಾ ದರ್ಶನಾ ಕೊಡ್ತಾನು... ಕುಂತ ನೋಡ್ರಿ ಖರೆ ಹಕ್ಕೀಕತ್ತು...'

ಮುದಿಕಿಯೂ ಹೇಳಿದಳು–

'ಹೌದ್ರೀ ತಂದೆ... ಕುಂತ ನೋಡ್ರಿ ಮಜಾ... ಟಂಟಂ ಅಂದ್ರ ಟಂಟಂ... ನನ್ನ ಮಮ್ಮಗಾ ಇದ್ದಂಗ ಈ ಗಾಡಿ...'

ನಾನು ಟಂಟಂ ಹತ್ತಿ ಕುಂತದ್ದೇ ತಡ... ಐವತ್ತು ಮಂದಿ ಅದೇ ಟಂಟಂ ಹತ್ತಲು ಓಡಿ ಬಂದರು. ಮೂರು ಮಂದಿ ಕುಂಡ್ರುವ ಟಂಟಂ ಗಾಡಿ ಇಷ್ಟು ಜನಾ ಹ್ಯಾಂಗ ಹಿಡಿಸತೈತಿ ಅಂತ...? ಟಂಟಂ ಗಾಡಿಯಲ್ಲಿ ನನ್ನ ಬಲಕ್ಕೆ ಒಬ್ಬಳು ಮಹಾ ಪ್ರಚಂಡ ಕುಂಬಳಕಾಯಿ ಗಾತ್ರದ ಮಹಿಳೆ ಕುಂತಳು. ತಕ್ಷಣ ನನ್ನ ಎಡಕ್ಕೆ ಇನ್ನೂ ಮಹಾಭಾರೀ ತೊಗರೀಚೀಲದಂತ ಹೆಂಗಸು ಕುಂತಳು. ಒಬ್ಬೊಬ್ಬರು ಒಂದೊಂದು ಸಜ್ಜಿಚೀಲ ಆಗಿದ್ದರು. ನಾನು ಮೆಂತೆಪಲ್ಲೆ ಶಿವುಡು ಆಗಿ ಅವರ ನಡುವೆ ಕುಂತಲ್ಲೇ... ಹೈಂಕ್... ಅಂದೆ!

ಅಬ್ಬಬ್ಬಾ... ನೋಡ ನೋಡುವಷ್ಟರಲ್ಲಿ ಆ ಬಲಕ್ಕೆ ಕುಂತವಳ ತೊಡೆ ಮೇಲೆ ಇನ್ನೊಬ್ಬಳು ಜಾಲೀಕಟಿಗಿ ಹೆಣ್ಣು ಡೈರೆಕ್ಟಾಗಿ ಕುಂತಿತು. 'ಥೂ ಇದೇನಿದು ಹೇಸಿತನಾ...' ಅನ್ನೂದ್ರಲ್ಲಿ ನನ್ನ ಎಡಕಿನವಳ ತೊಡೆ ಮೇಲೆ ಮತ್ತೆ ಇಬ್ಬರು... ಒಬ್ಬ ಹರೇದ ಹುರಬರಕ ಹುಡುಗಾ... ಇನ್ನೊಬ್ಬಳು ಕಣಜಿರ್ಲಿ ಹುಡಿಗಿ... ಹೊಗಬಿದ್ದು ಕುಂತರು. ಇವರ ಸಂದಿಯಲ್ಲಿ ಸಿಕ್ಕೊಂಡು ಶಿವನೇ ಅಂತ ಚೀರಿದೆ! ಟಂಟಂ ಗಾಡಿಯಲ್ಲಿ ತಗಡಿನ ಡಬ್ಬಿ ಆದೆ!

ಸಂಕ್ರಮಣ ಹೊಳೆಸ್ನಾನದ ಈ ದಿನದಿಂದ... ಮುಂದ ಬರೂ ಶಿವರಾತ್ರೀತಂಕಾ... ಕೂಡಲಸಂಗಮದ ಹೊಳಿಸ್ನಾನಾ ಅಂದ್ರ ಹತ್ತಾರು ಲಕ್ಷ ಜನರಿಗೆ ಅಮೃತಪಾನಾ! ಅಲ್ಲೀಕೇರಿ! ಡ್ರಾಯವರ ಟಂಟಂ ಗಾಡಿ ಸ್ಟಾರ್ಟ್